ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	385 (16)
ಉತ್ತರಿಸುವ ದಿನಾಂಕ	15.09.2021
ಉತ್ತರಿಸುವ ಸಚಿವರು	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದಲ್ಲಿ ಜಾರಿ ಮಾಡಲಾದ ಮುಖ್ಯಮಂತ್ರಿಗಳ ಬಹುಮಹಡಿ ವಸತಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ಫಲಾನುಭವಿಗಳ ವಿವರ ಒದಗಿಸುವುದು)	"ಮುಖ್ಯಮಂತ್ರಿಗಳ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಮನೆ/ಫ್ಲಾಟ್ ಗಳಿಗೆ ದಿನಾಂಕ 23.08.2021 ರಿಂದ 21.09.2021 ರವರೆಗೆ ಅರ್ಹ ಫಲಾನುಭವಿಗಳಿಂದ "ಆನ್‌ಲೈನ್" ಮೂಲಕ ಅರ್ಜಿಗಳನ್ನು (ಹೊಸದಾಗಿ) ಆಹ್ವಾನಿಸಲಾಗಿದೆ. ಅದರಂತೆ ದಿನಾಂಕ 12.09.2021ರ ಅಂತ್ಯಕ್ಕೆ ಒಟ್ಟು 7,021 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈ ಬಗ್ಗೆ ಅರ್ಜಿಗಳನ್ನು ಸ್ವೀಕರಿಸುತ್ತಿರುವುದರಿಂದ, ಪ್ರಸ್ತುತ ಫಲಾನುಭವಿಗಳ ಆಯ್ಕೆಯಾಗಿರುವುದಿಲ್ಲ.
ಆ	ಸರ್ಕಾರ ನಿಗಧಿಪಡಿಸಿಕೊಂಡಿದ್ದ ಗುರಿಯನ್ನು ತಲುಪಿದೆಯೇ; ಗುರಿ ತಲುಪಲು ಸಾಧ್ಯವಾಗದಿದ್ದಲ್ಲಿ ಕಾರಣಗಳೇನು? (ಮಾಹಿತಿ ಒದಗಿಸುವುದು)	"ಮುಖ್ಯಮಂತ್ರಿಗಳ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" 1 ಲಕ್ಷ ಮನೆಗಳನ್ನು ನಿರ್ಮಿಸುವ ಯೋಜನೆಗೆ ದಿನಾಂಕ : 27-12-2017 ರಂದು ಕೇಂದ್ರ ಸರ್ಕಾರ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ : 24.11.2018ರಲ್ಲಿ ಮೊದಲನೇ ಹಂತದಲ್ಲಿ 46,499 ಬಹುಮಹಡಿ ಮನೆಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅತ್ಯಗತ್ಯವಾಗಿ ಬೇಕಾಗಿದ್ದ ವಿವಾದರಹಿತ ವಾಸ ಯೋಗ್ಯ ಜಮೀನನ್ನು ಅಗತ್ಯ ಪ್ರಮಾಣದಲ್ಲಿ ನಿಗಮಕ್ಕೆ ಪಡೆದುಕೊಳ್ಳುವಲ್ಲಿ ಆದ ವಿಳಂಬ ಮತ್ತು ಬಹುತೇಕ ಜಮೀನುಗಳು ಕೃಷಿ ವಲಯದಲ್ಲಿದ್ದುದ್ದರಿಂದ ಕೃಷಿ ವಲಯದಿಂದ ವಸತಿ ವಲಯಕ್ಕೆ ಪರಿವರ್ತಿಸುವ ಪ್ರಕ್ರಿಯೆ ಮತ್ತು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ನೀಡಿರುವ ಜಮೀನುಗಳ ಪೈಕಿ ಕೆಲವು ಜಮೀನುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವ್ಯಾಜ್ಯಗಳು ಉದ್ಭವಿಸಿದ್ದು ಸ್ಥಳೀಯ ಸಮಸ್ಯೆಗಳೂ ಒಳಗೊಂಡಿರುವುದರಿಂದ ಇವುಗಳನ್ನು ಇತ್ಯರ್ಥಪಡಿಸುವುದು ಮತ್ತು ಸದರಿ ಜಮೀನುಗಳಲ್ಲಿನ ರಸ್ತೆ ಅಗಲ 7.0 ಮೀಟರ್ ನಿಂದ 9.0 ಮೀಟರ್ ಇದ್ದುದ್ದರಿಂದ ಅದಕ್ಕನುಗುಣವಾಗಿ ನಕ್ಷೆ ಅನುಮೋದನಾ ನಿಯಮಗಳಲ್ಲಿ ಸಡಿಲೀಕರಣ ಮಾಡುವ ಪ್ರಕ್ರಿಯೆ ಮುಂತಾದ ಕಾರಣಗಳಿಂದಾಗಿ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿದೆ. ಆದಾಗ್ಯೂ, ಈ ಮೇಲ್ಕಂಡ ಎಲ್ಲಾ ಸಮಸ್ಯೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬಗೆಹರಿಸಿ, ಪ್ರಸ್ತುತ 313 ಎಕರೆ ಜಮೀನನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಿ ಈಗಾಗಲೇ 42,374 ಮನೆಗಳ ಕಾಮಗಾರಿಯನ್ನು ಪ್ರಾರಂಭಿಸಿದ್ದು ಜಮೀನು ಸಮತಟ್ಟು ಹಂತದಲ್ಲಿ 10,814 ಮನೆಗಳು, ಮಣ್ಣು ಅಗೆತದ ಹಂತದಲ್ಲಿ 9,522 ಮನೆಗಳು, ತಳಪಾಯದ ಹಂತದಲ್ಲಿ 8,278 ಮನೆಗಳು, ಪ್ಲಿಂತ್ ಹಂತದಲ್ಲಿ 11,604 ಮನೆಗಳು ಹಾಗೂ ಛಾವಣಿ ಹಂತದಲ್ಲಿ 2,156 ಮನೆಗಳು ಪ್ರಗತಿಯಲ್ಲಿವೆ.

ಅನು ಕ್ರಮ	ಪ್ರಶ್ನೆ	ಉತ್ತರ
		ಅಲ್ಲದೇ, 2ನೇ ಹಂತದಲ್ಲಿ ನಿರ್ಮಿಸಲು ಉದ್ದೇಶಿಸಿದ 53,501 ಮನೆಗಳಿಗಾಗಿ ಒಟ್ಟು 418 ಎಕರೆ ಜಮೀನನ್ನು ಗುರುತಿಸಿದ್ದು, ಈ ಪೈಕಿ 182 ಎಕರೆ ಜಮೀನನ್ನು ನಿಗಮಕ್ಕೆ ಮಂಜೂರು ಮಾಡಿದ್ದು, 153 ಎಕರೆ ಜಮೀನು ನಿಗಮದಲ್ಲಿ ಲಭ್ಯವಿದೆ. ಇದರಲ್ಲಿ 7,484 ಮನೆಗಳಿಗೆ ಟೆಂಡರ್ ಕರೆದಿದ್ದು, 10,499 ಮನೆಗಳು ಡಿ.ಪಿ.ಆರ್. ತಯಾರಿಕಾ ಹಂತದಲ್ಲಿದೆ. ಈ ಯೋಜನೆಗಾಗಿ ಕೇಂದ್ರ ಸರ್ಕಾರದ ಪಾಲು ರೂ. 1500 ಕೋಟಿಗಳಿದ್ದು, ಈ ಪೈಕಿ ರೂ. 600 ಕೋಟಿಗಳನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರದ ಪಾಲು ರೂ. 1,520 ಕೋಟಿಗಳಿದ್ದು, ರೂ. 280 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇಲ್ಲಿಯವರೆಗೆ ಯೋಜನೆಗಾಗಿ ರೂ. 535.09 ಕೊಟಿಗಳನ್ನು ವೆಚ್ಚ ಮಾಡಲಾಗಿದೆ. ಕೇಂದ್ರ ಸರ್ಕಾರದ ಸೂಚನೆಯಂತೆ ಈ ಯೋಜನೆಯನ್ನು ಮಾರ್ಚ್ 2022ರ ಅಂತ್ಯದೊಳಗಾಗಿ ಪೂರ್ಣಗೊಳಿಸಬೇಕಾಗಿದೆ. ಇದೊಂದು ಮಹಾತ್ವಾಕಾಂಕ್ಷಿ ಯೋಜನೆಯಾಗಿದ್ದು, ಈ ಯೋಜನೆಯನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ಸರ್ಕಾರ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

[ಸಂಖ್ಯೆ: ವಇ 152 ಹೆಚ್‌ಎಫ್‌ಎ 2021]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು.